**1 ನೇ ಹೆಚ್ಚುವರಿ ಸತ್ರ ಮತ್ತು ವಿಶೇಷ ನ್ಯಾಯಾಲಯ, ಚಿಕ್ಕಮಗಳೂರು**

ಸ್ಪೆಷಲ್ ಮೊಕದ್ದಮೆ ನಂಃ 89/2020

| | | |
|---|---|---|
| ಸಾಕ್ಷಿದಾರರ ಹೆಸರು | - ಸಿದ್ದಮ್ಮ | ಪಿಡಬ್ಲೂ - 01 |
| ಗಂಡನ ಹೆಸರು | - ಕುಮಾರಪ್ಪ | ಸಿಡಬ್ಲೂ -01 |
| ವಯಸ್ಸು | - 52 ವರ್ಷ | |
| ಉದ್ಯೋಗ | - ಕೂಲಿ ಕೆಲಸ | |
| ವಾಸ ಸ್ಥಳ | - ನಂದಿ | |

ದಿನಾಂಕಃ 05-04-2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು. ಚಾಸಾ.2 ರಿಂದ 5 ಗೊತ್ತು. ನಾನು ಪರಿಶಿಷ್ಟ ಜಾತಿಯ ಛಲವಾದಿ ಜನಾಂಗಕ್ಕೆ ಸೇರಿದವಳು. ಆರೋಪಿ ಲಿಂಗಾಯಿತ ಜನಾಂಗಕ್ಕೆ ಸೇರಿದವನು.

2. ನಾನು ನಮ್ಮ ಮನೆಯಿಂದ ಸುಮಾರು 3 ಮನೆಗಳ ಮುಂದೆ ಇರುವ ಬೀದಿ ನಲ್ಲಿಯಲ್ಲಿ ಪ್ರತಿದಿನ ಬೆಳಿಗ್ಗೆ 8 ಗಂಟೆ ಸುಮಾರಿಗೆ ನೀರನ್ನು ಹಿಡಿಯಲು ಹೋಗುತ್ತಿದ್ದೆನು. ಅದೇ ರೀತಿ ಈಗ್ಗೆ 4 ವರ್ಷಗಳ ಹಿಂದೆ ಒಂದು ದಿನ ಬೆಳಿಗ್ಗೆ 8 ಗಂಟೆಗೆ ನಾನು ಸದರಿ ನಲ್ಲಿಯಲ್ಲಿ ನೀರನ್ನು ಹಿಡಿಯಲು ಹೋಗಿದ್ದೆನು. ಆ ಸಮಯದಲ್ಲಿ ಆರೋಪಿ ಬೀದಿ ನಲ್ಲಿಯಿಂದ ಸುಮಾರು 15 ಅಡಿ ದೂರದಲ್ಲಿ ಒಂದು ಬಾಡಿಗೆ ಮನೆಯಲ್ಲಿ ವಾಸವಾಗಿದ್ದನು. ನಾನು ನೀರನ್ನು ಹಿಡಿಯಲು ನಲ್ಲಿಯ ಕೆಳಗೆ ನನ್ನ ಕೊಡವನ್ನು

ಇರಿಸಿದ್ದೆನು. ಅಷ್ಟರಲ್ಲಿ ಅಲ್ಲಿಗೆ ಆರೋಪಿ ಬಂದು ನೀನು ಕೀಳು ಜಾತಿಯವಳು, ನಾನು ಮೇಲೆ ಜಾತಿಯವನು, ನಾನು ನೀರು ಹಿಡಿದ ಮೇಲೆ ನೀನು ನೀರನ್ನು ಹಿಡಿದುಕೋ ಎಂದು ಹೇಳಿ ಅವನ ತಲೆಯಿಂದ ನನ್ನ ತಲೆಗೆ ಗುದ್ದಿದನು, ತನ್ನ ಕಾಲಿನಿಂದ ನನ್ನ ಎದೆಗೆ ಒದ್ದನು ಮತ್ತು ನನ್ನ ಎದೆಯ ಬಲಭಾಗದಲ್ಲಿ ಕೈಯಿಂದ ಪರಚಿದನು. ಆರೋಪಿ ಸಿಮೆಂಟ್ ಇಟ್ಟಿಗೆಯ ತುಂಡಿನಿಂದ ನನ್ನ ತಲೆಯ ಎಡ ಭಾಗಕ್ಕೆ ಹೊಡೆದನು. ಆಗ ನನಗೆ ಕಣ್ಣು ಮಂಜಾಗಿ ಕಾಣದಂತೆ ಆಗಿ ಜ್ಞಾನ ತಪ್ಪಿ ಕೆಳಗೆ ಬಿದ್ದೆನು. ಆಗ ಚಾಸಾ.3 ನಾಗಪ್ಪ, ಚಾಸಾ.4 ಓಂಕಾರಪ್ಪ ಮತ್ತು ಕೆಂಚಪ್ಪ ಎಂಬುವವರು ಅಲ್ಲಿಗೆ ಬಂದು ಅಂಬ್ಯುಲೇನ್ಸ್ ನಲ್ಲಿ ನನ್ನನ್ನು ತರೀಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದರು. ಸದರಿ ಆಸ್ಪತ್ರೆಯವರು ತಲೆಗೆ ಪೆಟ್ಟು ಬಿದ್ದಿದೆ ಇದು ಕೋರೋನ ಸಮಯ ಎಂದು ಹೇಳಿ ನನ್ನನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದ್ದರಿಂದ ನನ್ನ ಗಂಡ ನನ್ನನ್ನು ಸದರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದರು.

3. ನಾನು ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ ತರೀಕೆರೆ ಪೊಲೀಸರು ಅಲ್ಲಿಗೆ ಬಂದು ನನ್ನನ್ನು ವಿಚಾರಿಸಿದರು. ಆಗ ನಾನು ಅವರಿಗೆ ಹೇಳಿಕೆಯನ್ನು ನೀಡಿದ್ದೇನೆ. ಸದರಿ ಹೇಳಿಕೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಹೇಳಿಕೆಯ ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಹೇಳಿಕೆಯ ದೂರನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು

ಗುರುತಿಸಲಾಯಿತು. ಮೇಲೆ ಹೇಳಿದಂತೆ ಗಲಾಟೆಯಾಗಿದ್ದು 6 ನೇ ತಾರೀಕಿನಂದು ಬೆಳಿಗ್ಗೆ 8 ಗಂಟೆಗೆ. ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದು 6 ನೇ ತಾರೀಕಿನಂದು ಸಂಜೆ 5 ಗಂಟೆಗೆ.

4. ಆರೋಪಿ ನನ್ನನ್ನು ಕುರಿತು ನೀನು ಕೀಳು ಜಾತಿಯವಳು ಎಂದು ಹೇಳಿ ಸೂಳೆಮುಂಡೆ, ಹಾದರಗಿತ್ತಿ ಎಂದು ಕೆಟ್ಟದಾಗಿ ಬೈದನು. ಆರೋಪಿ ನನ್ನ ಮೇಲೆ ಹಲ್ಲೆ ಮಾಡಲು ಬಳಸಿದ ಸಿಮೆಂಟ್ ತುಂಡನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಒಂದು ಸಿಮೆಂಟ್ ತುಂಡನ್ನು ನೋಡಿ ಗುರುತಿಸಿ ಆರೋಪಿ ನನ್ನ ತಲೆಗೆ ಹೊಡೆದಿದ್ದು ಅದರಿಂದಲೇ ಎಂದು ನುಡಿದ ಮೇರೆಗೆ ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

5. ದೂರು ಕೊಟ್ಟ ಮಾರನೆ ದಿನ ಅಂದರೆ 7 ನೇ ತಾರೀಕಿನಂದು ಪೊಲೀಸರು ಮೇಲೆ ಹೇಳಿದಂತೆ ಗಲಾಟೆ ನಡೆದಿದ್ದ ಸ್ಥಳಕ್ಕೆ ಬಂದಿದ್ದರು. ಆಗ ನನ್ನೊಂದಿಗೆ ಚಾಸಾ-2 ಮಂಜುಳ ಮತ್ತು ಚಾಸಾ-3 ನಾಗಪ್ಪ ರವರು ಇದ್ದರು. ಆರೋಪಿ ನನ್ನ ಮೇಲೆ ಗಲಾಟೆ ಮಾಡಿದ್ದ ಸ್ಥಳವನ್ನು ನಾನು ಪೊಲೀಸರಿಗೆ ತೋರಿಸಿದೆನು. ಸದರಿ ಸ್ಥಳವನ್ನು ಪೊಲೀಸರು ಪರಿಶೀಲಿಸಿ ಮಹಜರನ್ನು ಬರೆದುಕೊಂಡರು. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಮಹಜರನ್ನು ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಸದರಿ ಮಹಜರಿಗೆ ನಾನು, ಚಾಸಾ-2 ಮತ್ತು 3 ರವರು ಸಹಿ ಮಾಡಿದ್ದೇವೆ. ಸದರಿ ಮಹಜರ್ ಕಾಲಕ್ಕೆ ಸ್ಥಳದಲ್ಲಿ ಬಿದ್ದಿದ್ದ ಆರೋಪಿ ನನಗೆ

ಹೊಡೆಯಲು ಬಳಸಿದ್ದ ಮು.ಮಾ.1 ಸಿಮೆಂಟ್ ತುಂಡನ್ನು ನಾನು ಪೊಲೀಸರಿಗೆ ತೋರಿಸಿ ಹಾಜರು ಪಡಿಸಿದೆನು. ಅದನ್ನು ಅವರು ತಮ್ಮ ವಶಕ್ಕೆ ಪಡೆದುಕೊಂಡರು. ಮಹಜರ್ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದುಕೊಂಡರು. ಸಾಕ್ಷಿಗೆ 2 ಫೋಟೋಗಳನ್ನು ತೋರಿಸಲಾಗಿ, ಅವುಗಳಲ್ಲಿ ತನ್ನ ಇರುವಿಕೆಯನ್ನು ಗುರುತಿಸಿ, ಮಹಜರ್ ಸಮಯದಲ್ಲಿ ತೆಗೆದ ಫೋಟೋಗಳು ಅವೇ ಎಂದು ನುಡಿದಿರುತ್ತಾರೆ, ಸದರಿ ಫೋಟೋಗಳನ್ನು ನಿ.ಪಿ.3 ಮತ್ತು 4 ಎಂದು ಗುರುತಿಸಲಾಯಿತು. ಸದರಿ ಫೋಟೋಗಳಲ್ಲಿ ನನ್ನೊಂದಿಗೆ ಚಾಸಾ-2, 3 ಮತ್ತು ಪೊಲೀಸರ ಇರುವಿಕೆ ಕಂಡು ಬರುತ್ತದೆ ಮತ್ತು ನನ್ನ ಹಣೆಯ ಎಡಭಾಗದಲ್ಲಿ ಆಗಿದ್ದ ಗಾಯಕ್ಕೆ ಬ್ಯಾಂಡೇಜ್ ಹಾಕಿರುವುದು ಕಂಡು ಬರುತ್ತದೆ. ಸದರಿ ಮಹಜರನ್ನು ಪೊಲೀಸರು ಸಂಜೆ 4 ಗಂಟೆಯಿಂದ ಸುಮಾರು ಅರ್ಧ ಗಂಟೆಯವರೆಗೆ ಬರೆದುಕೊಂಡಿದ್ದಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

6. ದಿಃ 08-05-2020 ರಂದು ಪೊಲೀಸರು ನಿಮ್ಮನ್ನು ತರೀಕೆರೆ ಸಿವಿಲ್ ನ್ಯಾಯಾಲಯ ಮತ್ತು ಅಧಿಕ ಜೆ ಎಂ ಎಫ್ ಸಿ ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದ್ದರು ಎಂದರೆ ಸರಿ. ಆಗ ನೀವು ಅವರಿಗೆ ಘಟನೆಯ ಬಗ್ಗೆ ತಿಳಿಸಿ ಹೇಳಿಕೆ ನೀಡಿದ್ದೀರಿ ಎಂದರೆ ಸರಿ. ಅದೇ ದಿನ ನೀವು ಪೊಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿ

ಆರೋಪಿ ಸಿಮೆಂಟ್ ತುಂಡಿನಿಂದ ನಿಮ್ಮ ತಲೆಗೆ ಹೊಡೆದಿದ್ದಾಗಿ ಆಗ ಕಣ್ಣು ಮಂಜಾಗಿ ನೀವು ಕೆಳಗೆ ಬಿದ್ದಾಗ ಗಲಾಟೆಯ ಶಬ್ಧ ಕೇಳಿ ಚಾಸಾ.3, 4 ಮತ್ತು ಕೆಂಚಪ್ಪ ಎಂಬುವವರು ಬಂದು ಗಲಾಟೆಯನ್ನು ಬಿಡಿಸಿದ್ದಾಗಿ ತಿಳಿಸಿದ್ದೀರಿ ಎಂದರೆ ಸರಿ.

<u>ಪಾಟೀ ಸವಾಲುಃ</u>

(ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯ ಕೋರಿದ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ